ಅಧ್ಯಕ್ಷರು.—ತಾವು ಕಳಿಸಿರುವ ವಿಚಾರ ಏನು ಎಂಬುದನ್ನು ನೋಡಿ ಆದಷ್ಟು ಜಾಗ್ರತೆ ಆದು ಬರುವಂತೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ಮಾನ್ಯ ಹನುಮೇಗೌಡರು ಕಳಿಸಿರುವ ವಿಚಾರವನ್ನು ತಾವು ಬೇಗನೆ ತೆಗೆದುಕೊಳ್ಳಬೇಕು. ಏಕೆಂದರೆ ಇವತ್ತು ಬಹಳ ಜನ ರೈತರು ಕಷ್ಟಕ್ಕೆ ಸಿಕ್ಕಿದ್ದಾರೆ.

ಅಧ್ಯಕ್ಷರು.—ಅದನ್ನು ನಾಳೆ ತೆಗೆದುಕೊಳ್ಳುತ್ತೇವೆ.

Minority girls having taken away from Bangalore

ಶ್ರೀ ಸಿ. ಎಂ. ಇಬ್ರಾಹಿಂ (ಶಿವಾಜಿ ನಗರ.—ಸ್ವಾಮಿ, ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಇವತ್ತು ಅಲ್ಪಸಂಖ್ಯಾತರ ನೂರಾರು ಜನ ಹೆಣ್ಣುಮಕ್ಕಳನ್ನು ಮಾರಾಟಮಾಡಿದ್ದಾರೆ, ನಾವು ದೂರು ಕೊಟ್ಟರೂ ಪೋಲೀಸಿನವರು ಕ್ರಮ ತೆಗೆದುಕೊಳ್ಳುತ್ತಿಲ್ಲ.

MR. SPEAKER.—With out the permission of the Chair the hon'ble member cannot get up and speak. I am extremely sorry for the behaviour of the hon'ble member. He must obtain permission and then speak. He leads the house to disorder. I request him to co-operate with the chair to maintain the dignity and the decorm of the House.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಅಧ್ಯಕ್ಷರೇ, ಮುಂದೆ ಬರತಕ್ಕ ತಾಲ್ಲೂಕ್ ಬೋರ್ಡ್‌ಗಳ ಚುತಾವಣೆಯ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ.....

ಅಧ್ಯಕ್ಷರು —ನೋಡುತ್ತೇನೆ ಈಗ ತಾವು ಕುಳಿತುಕೊಳ್ಳಿ.

SRI D. DEVARAJ URS.—Regarding the subject matter raised by Miss Pramila and Sri Ibrahim, I have the information ready. But I want to tell one thing. This is concerned purely to the minorities and because it contains certain matters, I thought I should not read it here that is the reason why I requested Hon'ble Speaker whether it is appropriate for me to read out the statement. Still, if the hon'ble Member insists on it, I have no objection ; I will read it. But it concerns purely to the minority girls being taken away from Bangalore to outside for immoral traffic and on which the Police are not sleeping over the matter. They are actively concerned with it. But some people are not purposely giving the information. That is why I thought to seek your permission. If I spell out any information here, it might alert those set of people who are indulged in this affair. With this information, the chance of getting those victims may also be further delayed. They may also remove those people to some other place. Inspite of it, if the Members want it. I have no objection. I send it to the Members for perusal. Then if they still want me to read it in the House I have no objection.

Another point is that it might also affect the sentiments of minority people. These are all several points. Not that I am not ready with the information, I am ready with it.

ಶ್ರೀ ಸಿ. ಇಬ್ರಾಹಿಂ.—ತಾವು ಏನು ಒಂದು ಹೇಳಿಕೆ ಕೊಟ್ಟಿದ್ದೀರಿ. ಆದರೆ ಪೊಲೀಸರು ಎಷ್ಟರ ಮಟ್ಟಿಗೆ ಅಲರ್ಟ್ ಆಗಿದ್ದಾರೆ ಎನ್ನುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಯಾರು ಅಪರಾಧಿಗಳಿದ್ದರೋ ಅವರನ್ನು ಅರೆಸ್ಟ್ ಮಾಡಿ ಪುನಃ ಬಿಟ್ಟಿದ್ದಾರೆ. ಅದಕ್ಕೆ ಅಲ್ಲಿಯ ಸಮಾಜ ಕಾರ್ಯಕರ್ತರು ಮತ್ತು ಅಲ್ಲಿಯ ಮುಖಂಡರು, ಛೇರ್ಮನ್‌ರವರು ಅಲ್ಲಿಯ ಪೊಲೀಸ್ ಸ್ಟೇಷನ್ನಿಗೆ ಹೋಗಿ ಕೇಳಿದರೆ, ಅದಕ್ಕೆ ಅಲ್ಲಿಯ ಪೊಲೀಸ್ ಅಧಿಕಾರಿಗಳು ಏನ್ರಿ ನಿಮಗೆ ಬೇರೆ ಏನೂ ಕೆಲಸವಿಲ್ಲವೇನ್ರಿ ಪುನಃ ಸ್ಟೇಷನ್ನಿಗ ಬಂದರೆ ಆ ಕೇಸ್‌ನ್ನು ನಿಮ್ಮ ಮೇಲೆ ಹಾಕುತ್ತೇವೆ. ಎಂದು ಹೆದರಿಸಿ, ಬೆದರಿಸಿ ಕಳುಹಿಸಿ ಕೊಟ್ಟಿದ್ದಾರೆ ಆಗ ನಾನೇ ಸ್ವತಃ ಪೊಲೀಸ್ ಸ್ಟೇಷನ್ನಿಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿದಾಗ ಅವರು ಹೇಳಿದರು, ಆ ಮ್ಯಾಟರ್ ಆಗಲೇ ಜೆಡ್ ಆಗಿಹೋಗಿದೆ, ಪುನಃ ಏತಕ್ಕೆ ಕೇಳುತ್ತೀರಿ ಎಂದು ಹೇಳುತ್ತಾರೆ. ತಾವು ಹೇಳಿದಿರಿ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು. ನಾವು ಸ್ವತಃ ನಮ್ಮ ಕೈಯಿಂದ ದುಡ್ಡನ್ನು ಹಾಕಿಕೊಂಡು ಡೆಲ್ಲಿಗೂ, ಜಾನ್ಸಿಗೂ ಹೋಗಿ ಪತ್ತೆ ಹಚ್ಚಿ ಅಪರಾಧಿಗಳನ್ನು ಕರೆದುಕೊಂಡು ಬಂದು ಪೊಲೀಸ್ ಸ್ಟೇಷನ್ನಿಗೆ ಬಿಟ್ಟಿದ್ದೇವೆ. ಅಂಥವರನ್ನು ಇವತ್ತು ಪುನಃ ರಸ್ತೆಯಲ್ಲಿ ತಿರುಗಾಡುವುದಕ್ಕೆ ಬಿಟ್ಟಿದ್ದಾರೆ. ನಮ್ಮ ಜೊತೆಯಲ್ಲಿ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ತಾವು ತೋರಿಸುವುದಕ್ಕೆ ತಯಾರಾಗಿದ್ದೇವೆ.

SRI D. DEVARAJ URS.—Now the hon'ble Member gives me certain information. According to him the Police have not acted vigilently and properly or they might have indirectly connived, and sending them away etc. Therefore, I request the hon'ble Members to come to my chamber after the Assembly so that I can ask the Police Commissioner also to come and discuss these things to take proper action. I think hon'ble Member will agree with me not to reveal those names.

ಶ್ರೀಪತಿ ಎಸ್. ಪ್ರಮೀಳಾ.—ಸ್ವಾಮಿ, ಇದು ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕಂಥ ವಿಷಯ. ನಾನು ಆ ವಿಷಯದ ಬಗ್ಗೆ ಒಂದೆರಡು ನಿಮಿಷಗಳಲ್ಲಿಯೇ ಹೇಳಿಬಿಡುತ್ತೇನೆ ತಾವು ದಯವಿಟ್ಟು ಕೇಳಬೇಕು. ಇದು ಮಾನ ಅಪಮಾನದ ಪ್ರಶ್ನೆ. ಕರ್ನಾಟಕದಲ್ಲಿ ಎಷ್ಟೋ ವರ್ಷಗಳಿಂದ ಇದರ ಬಗ್ಗೆ ಕಂಪ್ಲೆಂಟ್ ಕೊಟ್ಟು ಕೊಟ್ಟು ಸುಸ್ತು ಆಗಿದೆ. ಪೋಲೀಸ್ ಸ್ಟೇಷನ್ನಿಗೆ ಹೋದರೆ ಅವರಿಗೆ ಏನೂ ಕೆಲಸವಾಗುತ್ತಿಲ್ಲ. ಮಕ್ಕಳನ್ನು ಪುಡುಕಿ ಕೊಡಿ ಎಂದರೆ ಇಲ್ಲಿಯವರೆಗೆ ಪುಡುಕಿ ಕೊಡುವುದಕ್ಕೆ ಆಗಿಲ್ಲ. ತಾವು ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು, ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಅವರು ಯಾರು ಯಾರಿದ್ದಾರೆ ಎಂಬುದನ್ನು ಬಹಿರಂಗ ಮಾಡಿ ಅದರಿಂದ ಜನಗಳಿಗೆ, ಸಾರ್ವಜನಿಕರಿಗೆ ಗೊತ್ತಾಗಿ ಅವರು ಇನ್ನು ಮುಂದೆ ಎಚ್ಚರಿಕೆಯಿಂದ ಅವರೊಡನೆ ವರ್ತಿಸಲು ಅನುಕೂಲವಾಗುತ್ತದೆ. ಇದೊಂದು ರಾಕೆಟ್ ಇದೆ. ಹೆಣ್ಣು ಮಕ್ಕಳನ್ನು ತೆಗೆದುಕೊಂಡು ಹೋಗಿ, ಡೆಲ್ಲಿಯಲ್ಲಿ ಮುಂತಾದ ಕಡೆಗಳಲ್ಲಿ ಮಾರಾಟ ಮಾಡುವುದು ಮಾಮೂಲು ಆಗಿದೆ. ಆದುದರಿಂದ ತಾವು ಇದನ್ನು ಅಷ್ಟು ಲಘುವಾಗಿ ತಿಳಿದುಕೊಳ್ಳಬಾರದು. ಏತಕ್ಕೆಂದರೆ ಇವತ್ತು ನನ್ನ ಹತ್ತಿರ ೩೦–೪೦ ಜನ ಹೆಣ್ಣು ಮಕ್ಕಳು ಬಂದಿದ್ದಾರೆ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳವರು ಉತ್ತರ ಹೇಳಿದ್ದಾರೆ. ಬೇಕಾದರೆ ಐ.ಜಿ.ಪಿ. ಯವರೊಡನೆ ಚರ್ಚೆ ಮಾಡಿ ಮುಂದಿನ ವ್ಯವಹಾರಗಳನ್ನು ತೆಗೆದುಕೊಳ್ಳೋಣ ವೆಂದು ಹೇಳಿದ್ದಾರೆ. ಅದು ಸರಿಯಾಗಿದೆ.

SRI D. DEVARAJ URS.—Some time, If I talk about persons and reveal their names the parents will feel bad about it. It is not the question of one individual but more than 30–40 people are involved in this. Then do you advice me to reveal the names ? Now the Hon'ble Member is saying that Police are not taking action etc., Certainly I will take action.

ಒಬ್ಬ ಸದಸ್ಯರು.—ತಾವು ಉಗ್ರವಾದ ಕ್ರಮ ತಗೆದುಕೊಳ್ಳಬೇಕು.